NOVEMBER 28, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಉಡುಪಿಯ ಶ್ರೀ ಕೃಷ್ಣ ದೇಗುಲಕ್ಕೆ,** ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ, ಭೇಟಿ; ಕನಕ ಕವಚ ಸಮರ್ಪಣೆ.
- **ಕಲ್ಯಾಣ ಕರ್ನಾಟಕದ 7** ಜಿಲ್ಲೆಗಳ, 2 ಸಾವಿರದ 500 ಹೆಕ್ಟರ್ ಕೃಷಿ ಭೂಮಿಗೆ ನೀರಾವರಿ ಕಲ್ಪಿಸಲು, ಸಚಿವ ಸಂಪುಟ ಒಪ್ಪಿಗೆ.
- **ಮಹಿಳೆಯರ ರಕ್ಷಣೆಗಾಗಿ, 'ಅಕ್ಕ ಪಡೆ'**; ಬೆಂಗಳೂರಿನ ಅರಮನೆ ಮೈದಾನದಲ್ಲಿ, ಇಂದು ಮುಖ್ಯಮಂತ್ರಿ ಚಾಲನೆ.
- **'ಹೆಣ್ಣು ಭ್ರೂಣ ರಕ್ಷಿಸಿ, ಲಿಂಗ ಅಸಮಾನತೆ ತಪ್ಪಿಸಿ'**; ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮನವಿ.

<><><>

**ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿ,** ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರೆತಿರುವುದು, ತಮಗೆ ಗೌರವದ ವಿಷಯ. ಈ ಮಠ ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಅತ್ಯಂತ ವಿಶೇಷ ಮಹತ್ವವನ್ನು ಹೊಂದಿದೆ. ಶ್ರೀ ಮಧ್ವಾಚಾರ್ಯರಿಂದ ಪ್ರೇರಿತವಾದ ಈ ಮಠ, ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಎಕ್ಸ್ ಮಾಧ್ಯಮದಲ್ಲಿ ಶ್ಲಾಘಿಸಿದ್ದಾರೆ.

<><><>

**ಉಡುಪಿಯ, ಪರ್ಯಾಯ ಶ್ರೀ ಪುತ್ತಿಗೆ ಮಠದ ವತಿಯಿಂದ,** ಇಂದು ಆಯೋಜಿತ, ಲಕ್ಷ ಕಂಠ ಗೀತಾ ಸ್ತೋತ್ರ ಪಠಣ ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ಪಾಲ್ಗೊಳ್ಳಲಿದ್ದಾರೆ. ಶ್ರೀಕೃಷ್ಣ ಮಠದ ಗರ್ಭಗುಡಿ ಎದುರಿನ, ಸುವರ್ಣ ತೀರ್ಥ ಮಂಟಪವನ್ನು ಉದ್ಘಾಟಿಸಿ, ಶ್ರೀ ಕನಕರ ಕಿಂಡಿಗೆ, ಕನಕ ಕವಚ ಸಮರ್ಪಿಸಲಿದ್ದಾರೆ. ವ್ಯಾಪಕ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಆದಿ ಉಡುಪಿ ಮೈದಾನದಲ್ಲಿ, ಹೆಚ್ಚುವರಿ ಹೆಲಿ ಪ್ಯಾಡ್ ನಿರ್ಮಿಸಲಾಗಿದೆ. ಇಂದು ಬೆಳಗ್ಗೆ, 11.45ಕ್ಕೆ ಆದಿ ಉಡುಪಿಯಿಂದ, ಶ್ರೀ ಕೃಷ್ಣ ಮಠದ ವರೆಗೆ ಪ್ರಧಾನಮಂತ್ರಿಯವರು, ಒಟ್ಟು 2 ಕಿಲೋ ಮೀಟರ್ ಸಾಗಲಿದ್ದು, 1 ಕಿಲೋ ಮೀಟರ್ ರೋಡ್ ಶೋ ನಡೆಸಲಿದ್ದಾರೆ.

<><><>

**ಸುರಕ್ಷತೆ ಖಾತ್ರಿ ಪಡಿಸಲು,** ರಾಷ್ಟ್ರೀಯ ಭದ್ರತಾ ಪಡೆ, ಕ್ಷಿಪ್ರ ಕಾರ್ಯಪಡೆ ಹಾಗೂ ಪೊಲೀಸ್ ಸಿಬ್ಬಂದಿ, ನಿನ್ನೆ ರಕ್ಷಣಾ ತಾಲೀಮು ಕೈಗೊಂಡರು.

<><><>

**ಉಡುಪಿ–ಚಿಕ್ಕಮಗಳೂರು ಸಂಸದ,** ಕೋಟ ಶ್ರೀನಿವಾಸ ಪೂಜಾರಿ ಮಾಹಿತಿ ನೀಡಿ, ಪ್ರಧಾನಮಂತ್ರಿಯವರು ಇಂದು ಉಡುಪಿಗೆ ಭೇಟಿ ನೀಡುತ್ತಿರುವ ಹಿನ್ನೆಲೆ, ವಿಶೇಷ ಸ್ವಾಗತ ಹಾಗೂ ಭಕ್ತಾದಿಗಳನ್ನು ಉದ್ದೇಶಿಸಿ, ಅವರು ಮಾತನಾಡಲಿರುವುದಾಗಿ, ತಿಳಿಸಿದರು.

<><><>

**ಕಲ್ಯಾಣ ಕರ್ನಾಟಕದ 7** ಜಿಲ್ಲೆಗಳ, 2 ಸಾವಿರದ 500 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಿ, ಅಂತರ್ಜಲ ಮಟ್ಟ ವೃದ್ಧಿಸಲು, 200 ಕೋಟಿ ರೂಪಾಯಿ ವೆಚ್ಚದಲ್ಲಿ, ಚೆಕ್ ಡ್ಯಾಂ ಹಾಗೂ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು, ಸಣ್ಣ ನೀರಾವರಿ ಇಲಾಖೆ ಮೂಲಕ ಕೈಗೊಳ್ಳಲು, ಸಚಿವ ಸಂಪುಟ ಅನುಮೋದಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ, ಸಭೆಯ ಬಳಿಕ ವಿವರ ನೀಡಿದರು. ಉತ್ತರಕನ್ನಡ ಜಿಲ್ಲೆಯ, ಹೊನ್ನಾವರ–ಭಟ್ಕಳ ವ್ಯಾಪ್ತಿಯ, ಮುಳ್ಳೋಡು ಗ್ರಾಮದ ಬಳಿ, ಶರಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಲು, 200 ಕೋಟಿ ರೂಪಾಯಿ ಅಂದಾಜು ಮೊತ್ತದ ಕಾಮಗಾರಿಗೆ, ಆಡಳಿತಾತ್ಮಕ ಅನುಮೋದನೆ.

ಕೊಪ್ಪಳ ಜಿಲ್ಲೆ, ಗಂಗಾವತಿ ಹೊರವಲಯದಲ್ಲಿ, 17 ಕೋಟಿ 50 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ, ನೂತನ ಸ್ಯಾಟ್‌ಲೈಟ್ ಬಸ್ ನಿಲ್ದಾಣದ ಕಾಮಗಾರಿ ಕೈಗೊಳ್ಳಲು, ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ.

<><><>

**ಕೇಂದ್ರದ, ಸಿಬ್ಬಂದಿ, ಸಾರ್ವಜನಿಕ** ಕುಂದುಕೊರತೆಗಳು, ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ ಆಯೋಜಿಸಿದ, ನಾಲ್ಕನೇ ಆವೃತ್ತಿಯ, ಡಿಜಿಟಲ್ ಜೀವಿತ ಪ್ರಮಾಣ ಪತ್ರ ಸಲ್ಲಿಕೆ ಮಾಸಿಕ ಅಭಿಯಾನ, ನಾಡಿದ್ದು ಭಾನುವಾರ ಸಂಪನ್ನಗೊಳ್ಳಲಿದೆ. ಡಿಜಿಟಲ್ ಇಂಡಿಯಾ ಹಾಗೂ ಸುಗಮ ಜೀವನ ಯೋಜನೆ ಅಡಿ, ಪಿಂಚಣಿದಾರರ ಡಿಜಿಟಲ್ ಸಬಲೀಕರಣದ ಕುರಿತು, ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್, ಉತ್ತರ ಕರ್ನಾಟಕ ವಲಯದ ಮುಖ್ಯಸ್ಥ, ಜಗದೀಶ ಚಿಕ್ಕನರಗುಂದ, ಮಾಹಿತಿ ನೀಡಿದ್ದಾರೆ.

<><><>

**ನಗರಗಳ ಸ್ವಚ್ಛತೆಗಾಗಿ ಶ್ರಮಿಸುತ್ತಿರುವ,** ಪೌರಕಾರ್ಮಿಕರು ಹಾಗೂ ಎಲ್ಲ ಸ್ವಚ್ಛತಾ ಸಿಬ್ಬಂದಿ ಉಪಯೋಗಕ್ಕಾಗಿ, 'ಸುವಿಧಾ' ವಿಶ್ರಾಂತಿ ಕೊಠಡಿಗಳಿಲ್ಲದ ಕಡೆ, ಮಸ್ಟರಿಂಗ್ ಪಾಯಿಂಟ್‌ಗಳಲ್ಲಿ ಕೊಠಡಿ ನಿರ್ಮಿಸಲಾಗುವುದು ಎಂದು, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ, ಪಿ. ರಘು ಭರವಸೆ ನೀಡಿದ್ದಾರೆ. ಬೆಂಗಳೂರಿನ ಯಲಹಂಕದ, ಬಿ.ಆರ್.ಅಂಬೇಡ್ಕರ ಭವನದಲ್ಲಿ, ಪೌರ ಕಾರ್ಮಿಕರ ಕುಂದುಕೊರತೆ ಆಲಿಸಲು, ನೇರ ಸಂವಾದ ಕೈಗೊಂಡರು. ಬೆಂಗಳೂರು ಉತ್ತರ, ನಗರ ಪಾಲಿಕೆ ವ್ಯಾಪ್ತಿಯ, 7 ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ, 300 ಜನ ಪೌರಕಾರ್ಮಿಕರು, ಚಾಲಕರು ಪಾಲ್ಗೊಂಡಿದ್ದರು.

<><><>

**ರಾಜ್ಯದ ಮಹಿಳೆಯರಿಗೆ,** ತುರ್ತು ಸಂದರ್ಭದಲ್ಲಿ, ಸಕಾಲಿಕ ನೆರವು ಮತ್ತು ರಕ್ಷಣೆ ಒದಗಿಸಲಿರುವ, 'ಅಕ್ಕ ಪಡೆ'ಗೆ, ಇಂದು ಬೆಳಗ್ಗೆ 10.30ಕ್ಕೆ, ಬೆಂಗಳೂರಿನ ಅರಮನೆ ಮೈದಾನದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲನೆ ನೀಡಲಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ, ಲಕ್ಷ್ಮೀ ಹೆಬ್ಬಾಳ್ಕರ, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘದ ಉದ್ಘಾಟನೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ, ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ.. ವಿಶೇಷಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ, ಕಲಾಶ್ರೀ ಪ್ರಶಸ್ತಿಗಳನ್ನು, ನಾಡಿನ 31 ಜಿಲ್ಲೆಗಳ, ಯುವ ಸಾಧಕರಿಗೆ ಹಾಗೂ ಹಿರಿಯರಿಗೆ ಪ್ರದಾನಿಸಲಿದ್ದಾರೆ, ಎಂದಿದ್ದಾರೆ.

<><><>

**ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲೂಕು,** ಗೊಡಚಿ ಗ್ರಾಮದ, ದೃಷ್ಟಿ ವಿಶೇಷ ಚೇತನ ಬಾಲಕ ಮೈಲಾರಿ ವಗ್ಗರ, ಯೋಗ ಹಾಗೂ ಮಲ್ಲಕಂಬ ಪಟುವಾಗಿದ್ದು, ರಾಷ್ಟ್ರ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಪ್ರಸ್ತುತ, ಗದಗ ಜಿಲ್ಲೆ, ರೋಣ ತಾಲೂಕು, ಹೊಳೆಆಲೂರಿನ ಮಾತೋಶ್ರೀ ತುಳಸಮ್ಮ ಕೇಲೂರ ಸಂಚಾಲಿತ, ಜ್ಞಾನ ಸಿಂಧು ಅಂಧ ಮಕ್ಕಳ ವಸತಿ ಶಾಲೆಯಲ್ಲಿ, 9ನೇ ತರಗತಿ ಓದುತ್ತಿದ್ದಾರೆ. ಸೃಜನಾತ್ಮಕ ಪ್ರದರ್ಶನ ಕಲೆ, ನೃತ್ಯ ಯೋಗ ವಿಭಾಗದಲ್ಲಿ, ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿಗೆ, ಮೈಲಾರಿ ಆಯ್ಕೆಯಾಗಿದ್ದು, ಇಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ, ಬೆಳಗ್ಗೆ 11 ಗಂಟೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, 'ಕಲಾಶ್ರೀ ಪ್ರಶಸ್ತಿ'ಯನ್ನು ಪ್ರದಾನಿಸಿ, ಗೌರವಿಸಲಿದ್ದಾರೆ. ಮಲ್ಲಕಂಬ ಹಾಗೂ ಯೋಗಪಟು, ಮೈಲಾರಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ತಡೆಯಲು,** ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಅಪರಾಧಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲು ಬದ್ಧವಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ ಸ್ಪಷ್ಟ ಪಡಿಸಿದ್ದಾರೆ. ಹೆಣ್ಣು ಹೊರೆಯಲ್ಲ, ಆಕೆ ಎಂದೆಂದಿಗೂ ಆಸರೆ. ಹಾಗಾಗಿ, ಹೆಣ್ಣು ಮಗುವನ್ನು ರಕ್ಷಿಸೋಣ. ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯ ಕುರಿತು ಮಾಹಿತಿ ಸಿಕ್ಕಲ್ಲಿ, ಉಚಿತ ಸಹಾಯವಾಣಿ 080– 2329–5603 ಅಥವಾ 080–2329 5605ಕ್ಕೆ ಕರೆ ಮಾಡಿ, ಮಾಹಿತಿ ನೀಡುವಂತೆ, ಸಚಿವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಮಾಹಿತಿಯನ್ನು ಗೌಪ್ಯವಾಗಿರಿಸಿ, 1 ಲಕ್ಷ ರೂಪಾಯಿ ಪುರಸ್ಕಾರ ನೀಡಲಿದೆ. ಹೆಣ್ಣು ಭ್ರೂಣ ರಕ್ಷಿಸಿ, ಲಿಂಗ ಅಸಮಾನತೆ ತಪ್ಪಿಸಿ ಎಂದು, ಕೋರಿದ್ದಾರೆ.

<><><>

**ಧಾರವಾಡದ, ದಕ್ಷಿಣ ಭಾರತ ಹಿಂದಿ ಪ್ರಚಾರ** ಸಭಾ, ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ, ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಪ್ರಾಂಗಣವನ್ನು, ಉತ್ತರಾದಿ ಮಠಾಧೀಶ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಲೋಕಾರ್ಪಣೆ ಮಾಡಿದರು.

<><><>

**ಬೆಂಗಳೂರಿನ ಜವಹರಲಾಲ ನೆಹರು** ತಾರಾಲಯದಲ್ಲಿ, ಇಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4.30ರ ವರೆಗೆ, ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ. ಪ್ರಯೋಗ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಆಂಡ್ ರಿಸರ್ಚ್ ಸೆಂಟರ್‌ನ ಹಿರಿಯ ವಿಜ್ಞಾನಿ ಕರುಣಾ ಸಿಂಹ, ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರು, ನಾಡಿದ್ದು ಭಾನುವಾರ, 30 ರಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಇದು, ಮನದ ಮಾತು ಬಾನುಲಿ ಭಾಷಣದ, 128ನೇ ಆವೃತ್ತಿಯಾಗಿದೆ. ಜನತೆ, ತಮ್ಮ ಆಲೋಚನೆಗಳು ಮತ್ತು ಸಲಹೆಗಳನ್ನು, ಇಂದು ರಾತ್ರಿಯ ಒಳಗೆ, ಉಚಿತ ಸಹಾಯವಾಣಿ ಸಂಖ್ಯೆ, 1800 11 7800, ನಮೋ ಆಪ್, ಅಥವಾ 'ಮೈ ಗೌವ್' ಓಪನ್ ಫೋರಂ ಮೂಲಕ, ಹಂಚಿಕೊಳ್ಳಬಹುದು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಉಡುಪಿಯ ಶ್ರೀ ಕೃಷ್ಣ ದೇಗುಲಕ್ಕೆ,** ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ, ಭೇಟಿ; ಕನಕ ಕವಚ ಸಮರ್ಪಣೆ.
- **ಕಲ್ಯಾಣ ಕರ್ನಾಟಕದ 7** ಜಿಲ್ಲೆಗಳ, 2 ಸಾವಿರದ 500 ಹೆಕ್ಟರ್ ಕೃಷಿ ಭೂಮಿಗೆ ನೀರಾವರಿ ಕಲ್ಪಿಸಲು, ಸಚಿವ ಸಂಪುಟ ಒಪ್ಪಿಗೆ.
- **ಮಹಿಳೆಯರ ರಕ್ಷಣೆಗಾಗಿ, 'ಅಕ್ಕ ಪಡೆ'**; ಬೆಂಗಳೂರಿನ ಅರಮನೆ ಮೈದಾನದಲ್ಲಿ, ಇಂದು ಮುಖ್ಯಮಂತ್ರಿ ಚಾಲನೆ.
- **'ಹೆಣ್ಣು ಭ್ರೂಣ ರಕ್ಷಿಸಿ, ಲಿಂಗ ಅಸಮಾನತೆ ತಪ್ಪಿಸಿ'**; ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮನವಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>